

## ಪುಟ್ಟ ಅಂಗಾಲು

ಪುಟ್ಟ ಕಂದಮ್ಮಗಳ ಅಂಗಾಲು
ನೋಡಿದಾಗೆಲ್ಲಾ ಅಂಗೈಲಿ
ಕೊಬ್ಬರಿ ಎಣ್ಣೆಯ ಸುರುವಿ
ಮೃದುವಾಗಿ ಅಂಗಾಲ ನೇವರಿಸಿದ
ನನ್ನಜ್ಜಿಯದೇ ನೆನಪು

ಬೊಚ್ಚು ಬಾಯಿಯ ಅಜ್ಜಿಗಾದರೋ
ದೂಳು ಮೆತ್ತಿದ ನಮ್ಮ ಅಂಗಾಲು
ಬಂಗಾರದ ಪಾದವಾಗಿ ಕಂಡಿದ್ದು
ಚೋದ್ಯವಲ್ಲ

ಆಗೆಲ್ಲ ಆಡಲು ಮನೆ ಮುಂದೆ
ಅಂಗಳವಿತ್ತು
ಅಂಗಳದಲ್ಲಿ ಮಣ್ಣು, ದೂಳಿತ್ತು
ಆಡಿ ಬಂದ ನಮ್ಮ ಅಂಗಾಲಿನ
ದೂಳಿನ ಹೆಜ್ಜೆಗುರುತು
ಕೆಂಪು ಜಗುಲಿಯ ತುಂಬ
ತುಂಬಿತ್ತು ಚಿಕ್ಕದು ದೊಡ್ಡದು, ಪುಟ್ಟದು
ಎಷ್ಟೊಂದು ಹೆಜ್ಜೆ ಗುರುತು!

ಯಾವ ಅಂಗಾಲಿನ ಯಾವ ಹೆಜ್ಜೆ?
ನಮ್ಮ ಅಜ್ಜಿಯ ಕಣ್ಣಿಗೆ ಕಂಡಿದ್ದು,
ದೂಳಲ್ಲ, ಮಣ್ಣಲ್ಲ, ಕೆಸರಲ್ಲ
ಬಂಗಾರದ ಹುಡಿಯಲ್ಲಿ ಮಿಂದೆದ್ದ
ಹೆಜ್ಜೆ ಗುರುತು, ಥೇಟ್
ಯಶೋದೆಯದೇ ಚಹರೆ.
ಹುಡುಕ ಬೇಕಿಲ್ಲ ಅಲ್ಲಿ ಇಲ್ಲಿ
ಮತ್ತೆಲ್ಲೂ ಕೃಷ್ಣನ.
ಕುಣಿದು ಬಂದ, ಮಕ್ಕಳೆಲ್ಲಾ
ಮುರಾರಿಯ
ಅಪರಾವತಾರ!
ಮಕ್ಕಳೆ, ನಿಮಗಿಲ್ಲವೇ ಅಂಗಳ?
ದೂಳು, ಮಣ್ಣು, ಕೆಸರು?
ಅಂತರಾಟಿಗೆಯಲ್ಲಿ ಕುಳಿತು
ನೆಲಕ್ಕೆ ತಾಕದ ಅಂಗಾಲು
ಕೊಳಕು ಮಾಡದ ಪುಟ್ಟ ಕಾಲುಗಳಿಗೆ
ಇದೆಯೇ ಅಮ್ಮನ ಹೆದರಿಕೆ?

**ಜಯಾ ಯಾಜಿ ಶಿರಾಲಿ**

## ರಜದ ಮಜ

ಬಂದಿದೆ ಬಂದಿದೆ
ನಮ್ಮ ರಜ
ತೋರಣ ಕಟ್ಟಿದೆ
ಭಾರಿ ಮಜ
ಬಿರು ಬೇಸಿಗೆ
ನಮಗೆ ಬಾದಿಸದು
ಸ್ನೇಹದ ಮೋಜು
ಕಾಣುವುದು.

ನೀರಿಗೆ ಕೂರಿಗೆ
ಹಾಕುವೆವು
ಮೀನನು ಹಿಡಿದು
ನಲಿಯುವೆವು.

ಹರಿವ ಹೊಳೆಗೆ
ಸೇತುವೆ ನಾವು
ಅಲೆಗಳ ಕುಣಿತವ
ಸವಿಯುವೆವು.

ನಮ್ಮನೆ ನಾವು
ಮರೆಯುವೆವು
ನಾವ್ಯಾರೆಂದು
ಹೇಳಿರಿ ನೀವು.

**ಕೆ. ನಿರ್ಮಲಾ, ಮರಡಿಹಳ್ಳಿ**